ರೀತಿಯ ಮಾನವೀಯತೆಯೂ ಒಂದು. ಈ ನವ್ಯ ಮಾನವೀಯತೆಯು ಸರ್ಕಾರವನ್ನೇ ಅಲ್ಲದೆ, ಇಡೀ ಸಮಾಜವನ್ನೇ ಆ ಜನರ ಕಲ್ಯಾಣಕ್ಕೆ ಹೊಣೆಯನ್ನಾಗಿ ಮಾಡುತ್ತದೆ. ಬೃಹತ್ ಕಂಪೆನಿಗಳು ಮತ್ತು ವಾಣಿಜ್ಯ ಸಂಸ್ಥೆಗಳನ್ನು ಸಹ ಸೇವಾಕ್ರಿಯೆಗಳಲ್ಲಿ ಪಾಲ್ಗೊಳ್ಳುವಂತೆ ಒತ್ತಡ ಹೇರಲಾಗುತ್ತಿದೆ. ಈಗ ಸುಶಿಕ್ಷಿತ ಜನರಲ್ಲಿ, ಸಾಮಾಜಿಕ ಸೇವೆ ಒಂದು ಕರ್ತವ್ಯ ಅಥವಾ ಸೇವೆ ಎಂದಾಗದೆ, ಅದು ಸಹಜವಾದ ಜೀವನಕ್ರಿಯೆ ಎಂಬ ಅರಿವು ಹೆಚ್ಚಾಗಿ ಮೂಡುತ್ತಿದೆ. ಸೇವೆಯು ಜೀವನದ ಸಹಜಮಾರ್ಗವಾಗಿ ರೂಪು ಗೊಳ್ಳಬೇಕಾದರೆ, ಅದು ಮಾನವ ಜನಾಂಗದ ಬಗ್ಗೆ ಇರಬೇಕಾದ ಉಚ್ಚಮಟ್ಟದ ಸೇವಾ ಮನೋಭಾವದ ಅಡಿಪಾಯದ ಮೇಲೆ ರಚಿತವಾಗಿರಬೇಕು. ಬಡವರ, ದುರ್ಬಲವರ್ಗದವರ, ದೀನದಲಿತರ ಬಗ್ಗೆ ಸಹಜವಾಗಿ ಇರುವ ಮನೋಭಾವವೆಂದರೆ ಕನಿಕರ ಅಥವಾ ಅನುಕಂಪ. ಇಂಥ ಮನೋಭಾವ ಸೇವಾಕರ್ತರಲ್ಲಿ ಅಹಂಕಾರವನ್ನೂ, ಸೇವೆಯನ್ನು ಸ್ವೀಕರಿಸುವವರಲ್ಲಿ ದೀನಭಾವವನ್ನೂ ಮೂಡಿಸುವುದು.

ಶ್ರೀರಾಮಕೃಷ್ಣರು ಸೇವೆಗಾಗಿ ಇರಬೇಕಾದ ಉತ್ತಮ ಮತ್ತು ಉದಾತ್ತವಾದ ಮನೋಭಾವವನ್ನು ಉಪದೇಶಿಸುತ್ತಾರೆ. ಅದೇ **ಶಿವಜ್ಞಾನೇ ಜೀವಸೇವಾ** – 'ಮಾನವನ ಸೇವೆಯೇ ಭಗವಂತನ ಸೇವೆ' ಎಂದು ಕೆಲಸ ಮಾಡುವುದು ಅಥವಾ ಮಾನವನಲ್ಲಿರುವ ಅಂತರ್ಯಾಮಿ ಭಗವಂತನಿಗೆ ಸೇವೆ ಮಾಡುವುದು. ನಾವು ಹಿಂದೆಯೇ ಹೇಳಿದಂತೆ, ಪ್ರಾಚೀನ ಭಾರತೀಯರ ದೃಷ್ಟಿಯಲ್ಲಿ ಮಾನವನ ನೈಜಸ್ವಭಾವ ದೇಹ ಮನಸ್ಸುಗಳಲ್ಲಿ ಇಲ್ಲ, ಅದು ಇರುವುದು ನೈಜ ಆತ್ಮದಲ್ಲಿ. ಈ ನೈಜ ಆತ್ಮವು ಪರಮಾತ್ಮನ ಅವಿಭಾಜ್ಯ ಭಾಗವೇ ಆಗಿದೆ, ಅಂದರೆ ಪ್ರತಿಯೊಬ್ಬನಲ್ಲಿಯೂ ದಿವ್ಯತೆ ಹುದುಗಿದೆ. ಆದ್ದರಿಂದ ಮಾನವನ ಸೇವೆಯು ಪರಮಾತ್ಮನ ಸೇವೆಯೇ ಆಗುತ್ತದೆ. ಈ ಮನೋಭಾವವು ಸೇವಾಕರ್ತರನ್ನು, ಸೇವಾಸ್ವೀಕೃತರನ್ನು ಉನ್ನತ ಸ್ಥಾನದಲ್ಲಿರಿಸುತ್ತದೆ. ರಾಮಕೃಷ್ಣ ಮಿಷನ್ನಿನ ಎಲ್ಲ ಕಾರ್ಯಗಳೂ ಇಂಥ ಭಾವನೆಯಲ್ಲಿಯೇ ನಡೆಯುತ್ತವೆ. ಇದು ಎಲ್ಲ ಜನರಿಗೂ ಅನ್ವಯವಾಗುವ ಸಾರ್ವತ್ರಿಕ ಭಾವನೆಯೇ ಸರಿ. ಇಂತಹ ಸೇವಾಭಾವನೆಯನ್ನು ಯುವಕರಲ್ಲಿ ಚಿಕ್ಕಂದಿನಿಂದಲೇ ಬೆಳೆಸಬೇಕು. ಆದ್ದರಿಂದ ಶಾಲಾಕಾಲೇಜುಗಳ ಪಾಠಪ್ರವಚನಗಳ ಪಟ್ಟಿಯಲ್ಲಿ ಈ ಅಂಶವು ಅಗ್ರಸ್ಥಾನ ಪಡೆಯಬೇಕು. ಇದರಿಂದ ಕನಿಷ್ಠ ಪಕ್ಷ ಕೆಲವು ಸಾವಿರ ಮಂದಿಗಾದರೂ, ಸೂಕ್ತ ಪ್ರೇರೇಪಣೆ ದೊರೆತರೆ ನಮ್ಮ ದೇಶವು ಎದುರಿಸುತ್ತಿರುವ ಹಲವು ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಬಹು ಬೇಗನೇ ಪರಿಹರಿಸಬಹುದು.

ಮೇಲಿನ ವಿಚಾರವಿನಿಮಯದಿಂದ, ನಮ್ಮ ಶಿಕ್ಷಣಕ್ಷೇತ್ರದಲ್ಲಿ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳಿಗೆ ಅಪಾರ ಮಹತ್ವವಿದೆ ಎಂಬುದನ್ನು ನಾವು ಕಂಡುಕೊಳ್ಳಬಹುದು. ಈ ಸಮ್ಮೇಳನವು ಈ ವಿಷಯವನ್ನು ಕುರಿತು ಆಳವಾಗಿ ವಿಚಾರ ಮಾಡುತ್ತದೆಯೆಂದು ನಾನು ಆಶಿಸುತ್ತೇನೆ.

## ನಿಜವಾದ ವಿದ್ಯೆ ಯಾವುದು?

ಯಾವ ವಿದ್ಯೆಯಿಂದ ನಾವು ದೇವರನ್ನು ತಿಳಿಯುತ್ತೇವೆಯೋ ಅದಕ್ಕೆ ಪರಾವಿದ್ಯೆ ಎಂದು ಹೆಸರು. ಉಳಿದವು ಕೇವಲ ಶಾಸ್ತ್ರಗಳು. ತತ್ತ್ವ, ತರ್ಕ ಅಥವಾ ವ್ಯಾಕರಣ –ಇವು ನಮ್ಮ ಮನಸ್ಸಿಗೆ ಒಂದು ಹೊರೆಯಂತೆ ಭ್ರಾಂತಿಯನ್ನು ಹುಟ್ಟಿಸುವುವು. ಗ್ರಂಥಗಳು ಕೆಲವು ವೇಳೆ ಗ್ರಂಥಿಗಳು. ಪರಾವಿದ್ಯೆಗೆ ಕರೆದೊಯ್ದರೆ ಮಾತ್ರ ಅವು ಒಳ್ಳೆಯವು.

ಶಾಸ್ತ್ರವನ್ನು ಓದಿದಲ್ಲದೆ ದೇವರ ವಿಚಾರ ಗೊತ್ತಾಗುವುದಿಲ್ಲವೆಂದು ಕೆಲವರು ತಿಳಿಯುವರು. ಆದರೆ ಓದುವುದಕ್ಕಿಂತ ಕೇಳುವುದು ಉತ್ತಮ. ಕೇಳುವುದಕ್ಕಿಂತ ಉತ್ತಮ, ನೋಡುವುದು ಅಥವಾ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು. ಶಾಸ್ತ್ರಗಳನ್ನು ಓದುವುದಕ್ಕಿಂತ ಗುರುಮುಖದಿಂದ ಕೇಳುವುದರಿಂದ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವಾಗುತ್ತದೆ. ಆದರೆ ಪ್ರತ್ಯಕ್ಷವಾಗಿ ನೋಡುವುದು ಅತ್ಯಂತ ಪರಿಣಾಮಕಾರಿ. ಕಾಶಿಯ ವಿಚಾರವಾಗಿ ಓದುವುದಕ್ಕಿಂತ ಅದನ್ನು ನೋಡಿದವನ ಬಾಯಿಂದ ಕೇಳುವುದು ಮೇಲು. ಪ್ರತ್ಯಕ್ಷವಾಗಿ ನೋಡುವುದು ಅತ್ಯುತ್ತಮ.

ಚೈತನ್ಯದೇವನು ದಕ್ಷಿಣದೇಶದಲ್ಲಿ ತೀರ್ಥಯಾತ್ರೆ ಮಾಡುತ್ತಿದ್ದಾಗ ಪಂಡಿತನೊಬ್ಬನ ಗೀತಾಪಾಠವನ್ನು ಕೇಳುತ್ತಿದ್ದ. ಭಕ್ತನೊಬ್ಬನು ಕಣ್ಣೀರು ಸುರಿಸುವುದನ್ನು ಆಗ ನೋಡಿದ. ಆ ಭಕ್ತನಿಗೆ ಅಕ್ಷರ ಕೂಡ ಗೊತ್ತಿರಲಿಲ್ಲ. ಗೀತೆಯ ಒಂದು ಶ್ಲೋಕವೂ ಅರ್ಥವಾಗುತ್ತಿರಲಿಲ್ಲ. ಏತಕ್ಕೆ ಅವನು ಕಣ್ಣೀರು ಸುರಿಸುತ್ತಿರುವನು ಎಂದು ಪ್ರಶ್ನಿಸಿದಾಗ ಅವನು ಹೀಗೆ ಹೇಳಿದನು: "ನನಗೆ ಗೀತೆಯ ಒಂದು ಅಕ್ಷರವೂ ತಿಳಿಯುವುದಿಲ್ಲ, ನಿಜ. ಆದರೆ ಇದನ್ನು ಓದುವಾಗ ಕುರುಕ್ಷೇತ್ರ ರಣರಂಗದಲ್ಲಿ ಅರ್ಜುನನ ಎದುರಿಗೆ ಕುಳಿತ ಕೃಷ್ಣನು ಗೀತೋಪದೇಶವನ್ನು ಮಾಡುತ್ತಿದ್ದ ಸುಂದರ ದೃಶ್ಯವು ನನ್ನ ಮನಸ್ಸಿನ ಕಣ್ಣಿಗೆ ಕಾಣಿಸುತ್ತಿದೆ. ನನ್ನ ಕಣ್ಣುಗಳಲ್ಲಿ ಪ್ರೇಮ ಮತ್ತು ಆನಂದಾಶ್ರುಗಳು ತುಂಬಿ ಬಂದುದಕ್ಕೆ ಅದೇ ಕಾರಣ."

(ಶ್ರೀರಾಮಕೃಷ್ಣ ಉಪದೇಶಾಮೃತ, ಪು. ೩೭, ೩೮)

# ಆಧುನಿಕ ಯುಗಕ್ಕೆ ಶ್ರೀರಾಮಕೃಷ್ಣರ ಉಪದೇಶಗಳು ಪ್ರಸ್ತುತವೇ?

ಸ್ವಾಮಿ ರಾಘವೇಶಾನಂದ

**ಇಂದಿನ ಕಾಲಕ್ಕೆ ಶ್ರೀರಾಮಕೃಷ್ಣರ ಉಪದೇಶಗಳು ಎಷ್ಟು ಪ್ರಸ್ತುತ ಎಂಬ ಸಂದೇಹ ನಮ್ಮಲ್ಲಿ ಮೂಡಬಹುದು. ಅವು ಪ್ರಸ್ತುತವಷ್ಟೇ ಅಲ್ಲ, ಅತ್ಯಂತ ಅವಶ್ಯಕ ಎಂಬ ಅಂಶವನ್ನು ಉದಾಹರಣೆಗಳ ಮೂಲಕ ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು. ಇವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಹಾಗೆಯೇ ಕರ್ನಾಟಕದಾದ್ಯಂತ ಪ್ರವಾಸ ಕೈಗೊಂಡು ರಾಮಕೃಷ್ಣ ಭಾವಧಾರೆಯ ಪ್ರಚಾರವನ್ನು ಮಾಡಿದ್ದಾರೆ.**

ಆಧುನಿಕ ಯುಗದಲ್ಲಿ ಅಂದರೆ ಈ ವೈಜ್ಞಾನಿಕ ಯುಗದಲ್ಲಿ ದೇಹವೇ ದೇವರು, ಭೋಗವೇ ಜೀವನದ ಗುರಿ ಎಂಬ ಧೋರಣೆಯೇ ಹೆಚ್ಚು. ಇಂಥ ಸಮಯದಲ್ಲಿ ಶ್ರೀರಾಮಕೃಷ್ಣರ ಜೀವನ, ಉಪದೇಶಗಳು ಯಾವ ರೀತಿಯಲ್ಲಿ ಸಮಂಜಸವಾಗಬಲ್ಲವು ಎಂಬ ಪ್ರಶ್ನೆ ಮನಸ್ಸಿನಲ್ಲಿ ಉದ್ಭವಿಸುವುದು ಸಹಜವೇ. ಆದರೆ ಅದೇ ಸಮಯದಲ್ಲಿ ನೂರಾರು, ಸಾವಿರಾರು ಜನ ಬುದ್ಧಿಜೀವಿಗಳು ಪ್ರಪಂಚದಾದ್ಯಂತ ಈ ಮಹಾತ್ಮರ ಜೀವನವನ್ನು ಓದುತ್ತಿರುವುದು, ಅನುಸರಿಸುತ್ತಿರುವುದು ಹಾಗೂ ತಮ್ಮ ಬಾಳ್ವೆಯಲ್ಲಿ ಶಾಂತಿ, ಆನಂದವನ್ನು ಪಡೆಯುತ್ತಿರುವುದು ಮತ್ತು ಅವರಿಗೆ ಗೌರವ ಸಲ್ಲಿಸುತ್ತಿರುವುದು ಅಷ್ಟೇ ಆಶ್ಚರ್ಯಕರ. ಶ್ರೀರಾಮಕೃಷ್ಣರ ಹೊರಗಿನ ಜೀವನ ಎಲ್ಲ ರೀತಿಯಲ್ಲೂ ಆಧುನಿಕ ಮಾನವನ ಜೀವನಕ್ಕೆ ವ್ಯತಿರಿಕ್ತವಾಗಿತ್ತು. ನಾವು ಉಡುಗೆ ತೊಡುಗೆಗಳಿಗೆ ಹೆಚ್ಚು ಮಹತ್ವ ಕೊಡುತ್ತೇವೆ. ಸಾವಿರಾರು ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡುತ್ತೇವೆ. ಆದರೆ ಈ ಅದ್ಭುತ ವ್ಯಕ್ತಿ ಎಂದೂ ಮೈಮೇಲೆ ಪೂರ್ಣ ಬಟ್ಟೆಯನ್ನೂ ತೊಡುತ್ತಿರಲಿಲ್ಲ. ಜನಸಮೂಹದ ಮಧ್ಯೆ ಇದ್ದರೂ, ದೈವೋನ್ಮಾದದಲ್ಲಿದ್ದಾಗ, ತಮ್ಮ ಮೈಮೇಲಿದ್ದ ಪಂಚೆ ಕೂಡ ಕೆಳಗೆ ಬಿದ್ದಿರುವ ಅರಿವಿರುತ್ತಿರಲಿಲ್ಲ. ಅವರ ಸುತ್ತಮುತ್ತಲಿದ್ದ ಮೇಧಾವಿಗಳಿಗೆ ಕೂಡ ಅದರ ಬಗ್ಗೆ ಗಮನವೋ, ಅಸಹ್ಯವೋ ಆಗುತ್ತಿರಲಿಲ್ಲ. ಅದಕ್ಕೆ ಬದಲಾಗಿ ಅವರೆಲ್ಲರ ಮನಸ್ಸಿನಲ್ಲಿ, "ಎಂತಹ ಬಾಲಸ್ವಭಾವದ ಮಹಾಪುರುಷರಿವರು" ಎಂಬ ಗೌರವ ಭಾವನೆ ಮೂಡುತ್ತಿತ್ತು. ಅವರ ಬಟ್ಟೆಯಿರಲಿ, ಕುರುಚಲು ಗಡ್ಡ, ಅವರ ಬಾಯಿಂದ ಹೊರಡುತ್ತಿದ್ದ ತೊದಲುಮಾತುಗಳು – ಇವೆಲ್ಲ ಅವರೊಬ್ಬ ಯುಗಪ್ರವರ್ತಕ ಪುರುಷನೇ ಎಂದು ಯೋಚಿಸುವಂತೆ ಮಾಡುತ್ತಿದ್ದವು.



ಆಧುನಿಕ ಮಾನವನ ಜೀವನದ ಗುರಿ ನಮಗೆಲ್ಲಾ ತಿಳಿದ ಹಾಗೆ 'ಧನಾರ್ಜನೆ ಹಾಗೂ ಧನಸಂಚಯ.' ಅದಕ್ಕೆ ಏನೆಲ್ಲಾ ಮಾರ್ಗಗಳನ್ನು ಅನುಸರಿಸುತ್ತಿದ್ದೇವೆ ಎಂಬುದನ್ನು ಯೋಚಿಸಿದರೆ ನಮಗೇ ನಾಚಿಕೆಯಾಗುತ್ತದೆ. ಶ್ರೀರಾಮಕೃಷ್ಣರಾದರೋ 'ಗಳಿಕೆ'ಯನ್ನು ಬೋಧಿಸಲಿಲ್ಲ; ಅದಕ್ಕೆ ಬದಲು 'ತ್ಯಾಗ'ವನ್ನು ಬೋಧಿಸಿದರು; ಅದನ್ನು ತಮ್ಮ ಜೀವನದಲ್ಲಿ ಗಾಢವಾಗಿ ಅಳವಡಿಸಿಕೊಂಡಿದ್ದರು. "ನಿರತಿಶಯವಾದ ಆನಂದ ಬೇಕಿದ್ದಲ್ಲಿ ಕಾಮಕಾಂಚನ ತ್ಯಾಗ ಮಾಡು, ಅವೇ ನಿನ್ನೆಲ್ಲ ಸಂಕಟಗಳಿಗೆ ಮೂಲ" ಎಂದು ಅವರು ಘಂಟಾಘೋಷವಾಗಿ ಘೋಷಿಸಿದರು. ಆಧುನಿಕ ನಾಗರಿಕ ವ್ಯಕ್ತಿಯು ಇಂದ್ರಿಯಬಂಧಿತವಾದ ಪ್ರಪಂಚಕ್ಕೆ ಭದ್ರವಾಗಿ ಅಂಟಿಕೊಂಡಿದ್ದಾನೆ. ಅದೇ ಜೀವನ ಎಂದು ಭಾವಿಸಿದ್ದಾನೆ. ಆದರೆ ಶ್ರೀರಾಮಕೃಷ್ಣರು ಇದಕ್ಕೆ ವಿರುದ್ಧವಾಗಿ, ಈ ಬಗೆಯ ಪ್ರಾಪಂಚಿಕ ಜೀವನವನ್ನು ನಿಸ್ಸಾರವೆಂದು ಭಾವಿಸಿದರು; ನಿರಂತರ ಹಾಗೂ ನಿರತಿಶಯವಾದ ಆನಂದಕೊಡುವ ಭಗವಂತನೆಡೆಗೆ ಮುಖಮಾಡಿ ಬಾಳಿದರು.

ಆದರೆ ಒಂದು ವಿಷಯದಲ್ಲಿ ಶ್ರೀರಾಮಕೃಷ್ಣರು ಎಂಥ ಆಧುನಿಕ ಮನುಷ್ಯನಿಗಿಂತಲೂ ಎಷ್ಟೋ ಹೆಚ್ಚುಪಟ್ಟು ಆಧುನಿಕರಾಗಿದ್ದರು. ಅವರ ಆಧುನಿಕತೆ ಇರುವುದು, 'ಭಗವಂತನ ಸಾಕ್ಷಾತ್ಕಾರ'ದಲ್ಲಿ. ನಮ್ಮಲ್ಲಿ ಬಹಳಷ್ಟು ಜನ ಭಗವಂತನನ್ನು ನಂಬುತ್ತೇವೆ. ನಮ್ಮ ನಂಬಿಕೆಯೆಲ್ಲ ಶಾಸ್ತ್ರದ ಆಧಾರದ ಮೇಲೆ ಅಥವಾ ನಮ್ಮ ಬುದ್ಧಿಯ ತರ್ಕದ ಮೇಲೆ ಇರುತ್ತದೆ. ಆದರೆ ಶ್ರೀರಾಮಕೃಷ್ಣರು, 'ಭಗವಂತ ಸತ್ಯ' ಎಂದು ತಮ್ಮ ಸಾಕ್ಷಾತ್ಕಾರದ, ಅನುಭವದ ಆಧಾರದ ಮೇಲೆ ತೀರ್ಮಾನಕ್ಕೆ ಬಂದಿದ್ದರು. ಈ ವಿಷಯದಲ್ಲಿ ಶ್ರೀರಾಮಕೃಷ್ಣರ ಆಲೋಚನೆ ಬೇರೆಲ್ಲರಿಗಿಂತ ಭಿನ್ನವಾಗಿತ್ತು. "ದೇವರಿದ್ದಾನೆ ಎನ್ನುವುದಕ್ಕೆ ಪ್ರಮಾಣವೇನು?" ಎಂದು ಶ್ರೀರಾಮಕೃಷ್ಣರು ಪ್ರಶ್ನಿಸಿಕೊಂಡರು. ಅವರಿಗೆ ದೊರೆತ ಉತ್ತರವೇನೆಂದರೆ, 'ನೇರ ಅನುಭವ'. ಕಾಳಿಯ ದೇವಸ್ಥಾನಕ್ಕೆ ಪೂಜೆ ಮಾಡಲು ಹೆಜ್ಜೆ

ಇಟ್ಟ ಮೊದಲ ದಿನವೇ ಅವರು ಅಂದುಕೊಂಡರು, "ಜಗನ್ಮಾತೆಯು ಈ ವಿಗ್ರಹದಲ್ಲಿ ಇರುವಳಾದರೆ ಅವಳ ದರ್ಶನ ಮಾಡಲೇ ಬೇಕು." ಇದೇ ಅವರ ಸಾಧನೆಗೆ ನಾಂದಿಯಾಯಿತು. ಸಾಧನೆಯಿಂದ ಅದರಲ್ಲಿ ಯಶಸ್ವಿಯಾದರು ಕೂಡ. ಹೀಗೆ ಅಪನಂಬಿಕೆಯ, ನಾಸ್ತಿಕತೆಯ, ವೈಜ್ಞಾನಿಕತೆಗೆ ಮಾತ್ರ ಬೆಲೆ ಕೊಡುವ ಬುದ್ಧಿಜೀವಿಗಳಿಗೆ, ವೈಜ್ಞಾನಿಕ ರೀತಿಯಾದ ಪ್ರಶ್ನೆ, ಪ್ರಯೋಗ, ಅನುಭವದ ಮೂಲಕವೇ ಭಗವಂತ ಸತ್ಯ ಎಂಬುದನ್ನು ಅವರು ತೋರಿಸಿಕೊಟ್ಟರು. ಎಲ್ಲ ಧರ್ಮಗಳ ಮಾರ್ಗವನ್ನು ಅನುಸರಿಸಿ ಆಧುನಿಕ ಜಗತ್ತಿಗೆ, ಆಧುನಿಕ ಮಾನವನಿಗೆ ಅವರು ಕೊಟ್ಟುಹೋಗಿರುವ ಸಂದೇಶ ಅತಿ ಮೌಲಿಕವಾದದ್ದು.

ಇಂದು ಜಗತ್ತಿನಲ್ಲಿ ಇಷ್ಟೊಂದು ರಕ್ತಪಾತ ನಡೆಯುತ್ತಿರುವುದು ಯಾವ ಕಾರಣದಿಂದ? ಪ್ರಪಂಚದ ವಿವಿಧ ಧರ್ಮಗುರುಗಳು ತಮ್ಮ ಧರ್ಮವೇ ಶ್ರೇಷ್ಠ, ಇತರ ಮತಗಳ ಅನುಯಾಯಿಗಳನ್ನು ಮತಾಂತರಗೊಳಿಸಬೇಕು ಇಲ್ಲವೇ ನಾಶ ಮಾಡಬೇಕು; ಇದೇ ನಾವು ನಮ್ಮ ಧರ್ಮಕ್ಕೆ ಸಲ್ಲಿಸುವ ಗೌರವ ಎಂಬ ಭಾವನೆಯಿಂದ ಯುದ್ಧವನ್ನು ಘೋಷಿಸಿ ರಕ್ತಪಾತ ಮಾಡುತ್ತಿರುವುದು, ಹಾಗೆಯೇ ಆತಂಕ ವಾದದಿಂದ ಇದನ್ನು ಸಾಧಿಸಬಹುದು ಎಂಬ ಭ್ರಮೆಯಲ್ಲಿರುವುದು. ಇದು ಪ್ರಪಂಚದ ಶಾಂತಿಯನ್ನು ಅಲ್ಲೋಲಕಲ್ಲೋಲ ಗೊಳಿಸಿಲ್ಲವೆ? ಇವರೆಲ್ಲರಿಗೂ ಶ್ರೀರಾಮಕೃಷ್ಣರು ತಮ್ಮ ನೇರ ಅನುಭವದಿಂದ ಕೊಟ್ಟಿರುವ ಉತ್ತರ ಇದು: ಪ್ರತಿಯೊಬ್ಬನೂ ತನ್ನ ಗಡಿಯಾರವೇ ಸರಿಯಾದ ಸಮಯ ಸೂಚಿಸುತ್ತದೆ ಎಂದು ಭಾವಿಸಿದ್ದಾನೆ; ಆದರೆ ಯಾರೊಬ್ಬರ ಗಡಿಯಾರವೂ ಸರಿಯಿಲ್ಲವಲ್ಲ! ಈ ಬಗೆಯ ಹಿಂಸಾತ್ಮಕ ಮನೋಭಾವಕ್ಕೆ ಕಾರಣ, ಅಂತಹ ವ್ಯಕ್ತಿಗಳಲ್ಲಿ ಮನೆಮಾಡಿರುವ ಸಂಕುಚಿತ ಮನೋಭಾವ ಹಾಗೂ ನೇರವಾಗಿ ತಮ್ಮ ಧರ್ಮವನ್ನೇ ಅವರು ಸರಿಯಾಗಿ ತಿಳಿದುಕೊಳ್ಳದೇ ಇರುವುದು.

ಶ್ರೀರಾಮಕೃಷ್ಣರು ವೈವಿಧ್ಯತೆಯಲ್ಲಿ ಏಕತೆ ಇದೆ ಎಂದು ಪ್ರತಿಪಾದಿಸಿದರು. "ಎಲ್ಲ ಧರ್ಮಗಳೂ ಸತ್ಯ; ಮಾರ್ಗ ಹಲವು, ಆದರೆ ಗುರಿ ಒಂದೇ" ಎಂದರು. ಇದನ್ನು ಅವರು ಬರಿಯ ಮಾತಿನಿಂದ ಹೇಳಲಿಲ್ಲ; ಹನ್ನೆರಡು ವರ್ಷಗಳ ಕಾಲ ಎಲ್ಲ ಧರ್ಮಮಾರ್ಗ ಗಳನ್ನೂ ಒಂದಾದ ಮೇಲೆ ಒಂದರಂತೆ ಅನುಸರಿಸಿ, ಸಾಧಿಸಿ, ಸಾಕ್ಷಾತ್ಕಾರಗೊಳಿಸಿಕೊಂಡು ತಮ್ಮ ಸ್ವಂತ ಅನುಭವದ ಆಧಾರದ ಮೇಲೆ ಬೋಧಿಸಿದರು. ಶ್ರೀರಾಮಕೃಷ್ಣರ ಮತ್ತೊಂದು ಘನ ಉಪದೇಶವೆಂದರೆ, ಈ ಆಧುನಿಕ ಯುಗದಲ್ಲಿ ಸ್ವಾರ್ಥಪರರಾಗಿ ಜೀವನ ನಡೆಸುತ್ತಿರುವ, ದೇಶದ ಎಲ್ಲ ಸಂಪತ್ತನ್ನೂ ಸೂರೆ ಹೊಡೆದು ತಾವು ಮಾತ್ರ ಅನುಭವಿಸಬೇಕೆಂದು ಹೋರಾಡುತ್ತಿರುವ ಅಲ್ಪಜೀವಿಗಳಿಗೆ, ಮನುಷ್ಯ ಜೀವನದ ಅಂತಿಮ ಗುರಿಯೇನು ಎಂಬುದರ ಬಗ್ಗೆ ಸ್ವಲ್ಪ ಗಮನಹರಿಸಿ ಎಂದು ಎಚ್ಚರಿಕೆಯಿತ್ತದ್ದು.

ಬಂಕಿಮಚಂದ್ರ ಬಂಗಾಳಿ ಭಾಷೆಯ ಪ್ರಸಿದ್ಧ ಬರಹಗಾರ. ವಂದೇಮಾತರಂ ಗೀತೆಯನ್ನು ರಚಿಸಿದವನು. ಅವನು ದೊಡ್ಡ ಸರ್ಕಾರಿ ಹುದ್ದೆಯಲ್ಲಿದ್ದನು. ಅವನು ಶ್ರೀರಾಮಕೃಷ್ಣರನ್ನು ಆಗಾಗ ಭೇಟಿ ಮಾಡಲು ಬರುತ್ತಿದ್ದ. ಒಮ್ಮೆ ಶ್ರೀರಾಮಕೃಷ್ಣರು ಅವನ ಸ್ನೇಹಿತನಾದ ಅಧರಸೇನ ಎಂಬ ಡೆಪ್ಯೂಟಿ ಮ್ಯಾಜಿಸ್ಟ್ರೇಟ್‌ನ ಮನೆಗೆ ಬಂದಿದ್ದರು. ಅಲ್ಲಿಗೆ ಇವನೂ ಬಂದಿದ್ದ. ಮಾತಿನ ಮಧ್ಯೆ ಶ್ರೀರಾಮಕೃಷ್ಣರು ಬಂಕಿಮನಿಗೆ, "ಮನುಷ್ಯನ ಕರ್ತವ್ಯವೇನು?" ಎಂದು ಕೇಳಿದರು. ಅದಕ್ಕೆ ಬಂಕಿಮ, "ಅದರ ಸಂಬಂಧವಾಗಿ ಹೇಳಬೇಕೆಂದರೆ, ಆಹಾರ, ನಿದ್ರೆ, ಮೈಥುನ" ಎಂದು ಉತ್ತರಕೊಟ್ಟ. ಇದಕ್ಕೆ ಶ್ರೀರಾಮಕೃಷ್ಣರು ಸಿಟ್ಟುಗೊಂಡು, "ಥೀ! ನಿನಗೆ ನಾಚಿಕೆ ಹೇಸಿಗೆ ಅನ್ನುವುದು ಏನೂ ಇಲ್ಲ! ಹಗಲೂ ರಾತ್ರಿ ನೀನು ಏನು ಮಾಡುತ್ತಿದ್ದೀಯೋ ಅದೇ ನಿನ್ನ ಬಾಯಿಂದ ಹೊರಬೀಳುತ್ತದೆ. ಜನ ಏನು ತಿನ್ನುತ್ತಾರೋ ಅದನ್ನೇ ತೇಗುತ್ತಾರೆ. ಮೂಲಂಗಿ ತಿಂದರೆ ಮೂಲಂಗಿಯ ವಾಸನೆಯ ತೇಗು ಬರುತ್ತದೆ. ಹಗಲೂ ಇರುಳೂ ನೀನು ಕಾಮಕಾಂಚನದ ಮಧ್ಯೆ ಬಿದ್ದಿದ್ದೀಯೆ. ಅದಕ್ಕಾಗಿಯೇ ನಿನ್ನ ಬಾಯಿಂದ ಈ ಮಾತುಗಳು ಹೊರಬರುತ್ತಿವೆ. ಕೇವಲ ವಿಷಯಚಿಂತನೆಯಲ್ಲಿಯೇ ಮುಳುಗಿಹೋಗಿದ್ದರೆ, ಲೆಕ್ಕಾಚಾರದ ಸ್ವಭಾವ ಬಂದುಬಿಡುತ್ತದೆ; ಮನುಷ್ಯ ಕಪಟಿಯಾಗಿಬಿಡುತ್ತಾನೆ. ಭಗವಚ್ಚಿಂತನೆ ಮಾಡಿದರೆ ಸರಳನಾಗಿಬಿಡುತ್ತಾನೆ" ಎಂದರು.

ಆಧುನಿಕ ಮಾನವನು ನೆನಪಿನಲ್ಲಿಡಬೇಕಾದ ಮುಖ್ಯ ಸಂಗತಿಯೆಂದರೆ, 'ಭೋಗಜೀವನವೇ ಮನುಷ್ಯನ ಅಂತಿಮ ಗುರಿಯಲ್ಲ' ಎನ್ನುವುದು. ತನ್ನನ್ನು ತಾನು ಅರಿಯುವುದು, ಸತ್ಯಸಾಕ್ಷಾತ್ಕಾರ ಮಾಡಿಕೊಳ್ಳುವುದು, ಭಗವಂತನ ದರ್ಶನಕ್ಕಾಗಿ ಜೀವನ ನಡೆಸುವುದು – ಇವೇ ಜೀವನದ ಮುಖ್ಯವಾದ ಗುರಿ. ಆಧುನಿಕ ಯುಗಕ್ಕೆ ಭಗವತ್ಸಾಕ್ಷಾತ್ಕಾರದ ಮಾರ್ಗವನ್ನು ಶ್ರೀರಾಮಕೃಷ್ಣರು ಹೊಸ ರೀತಿಯಾಗಿ ತಿಳಿಸಿಹೋಗಿದ್ದಾರೆ. ಈ ಆಧುನಿಕ ಯುಗದಲ್ಲಿ ಮನುಷ್ಯ ಅತ್ಯಂತ ಸ್ವಾರ್ಥಪರ. ಎಷ್ಟು ಹಣ ಗಳಿಸಿದರೂ, ಯಾವ ಮಾರ್ಗದಲ್ಲಿ ಗಳಿಸಿದರೂ, ಅವನಿಗೆ ತೃಪ್ತಿ ಎಂಬುದಿಲ್ಲ. ಒಬ್ಬ ಭಕ್ತ ಶ್ರೀರಾಮಕೃಷ್ಣರನ್ನು ಪ್ರಶ್ನಿಸಿದ, "ಹಾಗಾದರೆ ಹಣ ಗಳಿಸುವುದು ತಪ್ಪೇ?" ಅದಕ್ಕೆ ಅವರ ಉತ್ತರ ಹೀಗಿತ್ತು: "ಖಂಡಿತ ಇಲ್ಲ. ಆದರೆ ಸತ್ಯಮಾರ್ಗದಿಂದ ಮಾತ್ರ ಹಣ ಗಳಿಸಬೇಕು." ಈ ಸತ್ಯಮಾರ್ಗ ಎನ್ನುವುದಕ್ಕೆ ನಾವು ಈಗ ಎಷ್ಟು ತಾನೇ ಬೆಲೆ ಕೊಡುತ್ತಿದ್ದೇವೆ! ನಮ್ಮ ದೇಶದ ಸಮಸ್ತ ಸಮಸ್ಯೆಗಳಿಗೂ ಇದೇ ಕಾರಣವಲ್ಲವೇ!

ಭಗವತ್‌ಸಾಕ್ಷಾತ್ಕಾರ ಪಡೆಯಲು, ಸತ್ಯದರ್ಶನ ಮಾಡಲು, ಆನಂದದ, ತೃಪ್ತಿಯ ಜೀವನ ನಡೆಸಲು, ಶ್ರೀರಾಮಕೃಷ್ಣರ ಅಮೋಘವಾದ ಸಂದೇಶವೆಂದರೆ 'ಜೀವಸೇವೆಯೇ ಶಿವಸೇವೆ' ಎನ್ನುವುದು. ಸ್ವಾಮಿ ವಿವೇಕಾನಂದರಿಗೆ ಒಮ್ಮೆ ಶ್ರೀರಾಮಕೃಷ್ಣರು ಕೇಳಿದರು, "ನರೇನ್, ನಿನಗೆ ಬೇಕಾದುದನ್ನು ಬೇಡಿಕೊ, ಅದನ್ನು ಕೊಡುವೆನು." ನರೇಂದ್ರ ತಕ್ಷಣ ಕೇಳಿದ, "ಗುರುಗಳೇ, ನಾನು ಯಾವುದಾದರೂ ಗುಹೆಯಲ್ಲಿ ಧ್ಯಾನಸ್ಥನಾಗಿ ಕುಳಿತು, ಇಡೀ ಜೀವನವನ್ನು ನಿರ್ವಿಕಲ್ಪಸಮಾಧಿಯಲ್ಲಿ ಕಳೆಯಬೇಕು." ಶ್ರೀರಾಮಕೃಷ್ಣರು ಅವನ ಈ ಬೇಡಿಕೆಯಿಂದ ಅತ್ಯಂತ ಅಸಮಾಧಾನಗೊಂಡು ಬೇಸರದಿಂದ ಹೇಳಿದರು, "ಥೀ, ಎಂತಹ ಸ್ವಾರ್ಥಿ ನೀನು! ಸ್ವಂತ